# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1291 |
| 2 | ಸದಸ್ಯರ ಹೆಸರು | ಶ್ರೀ.ಹೆಚ್. ಎಂ. ರಮೇಶ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ವಿಷಯ | ರೇಷ್ಮೆ ಇಲಾಖೆಯಲ್ಲಿರುವ ಯೋಜನೆಗಳ ಬಗ್ಗೆ |
| 4 | ಉತ್ತರಿಸುವ ದಿನಾಂಕ | 24-12-2021 |
| 5 | ಉತ್ತರಿಸುವವರು | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಪ್ರಸಕ್ತ ಸಾಲಿನಲ್ಲಿ ರೇಷ್ಮೆ ಇಲಾಖೆಯಲ್ಲಿರುವ ಯೋಜನೆಗಳಾವುವು;(ವಿವರ ನೀಡುವುದು) | ರೇಷ್ಮೆ ಇಲಾಖೆಯಲ್ಲಿ ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿರುತ್ತದೆ.<br><br>1. ರೇಷ್ಮೆ ಅಭಿವೃದ್ಧಿ ಯೋಜನೆ.<br>2. ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕತೃರ್ತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು<br>3. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ<br>4. ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು.<br>5. ಕಟ್ಟಡ ಕಾಮಗಾರಿಗಳು ಯೋಜನೆ<br>6. ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ<br>7. ಉತ್ಪಾದನೆ / ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ ಕಾರ್ಯಕ್ರಮ<br>8. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ.<br>9. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಹಿಪ್ಪುನೇರಳೆ ನರ್ಸರಿ / ತೋಟ ಸ್ಥಾಪನೆ, ತೋಟ ನಿರ್ವಹಣೆ ಮತ್ತು ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಸ್ಥಾಪನೆ ಹಾಗೂ ನಿರ್ವಹಣೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, ರೈತರಿಗೆ ಕೂಲಿ/ಸಾಮಗ್ರಿ ವೆಚ್ಚವನ್ನು ಭರಿಸುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗವಕಾಶವನ್ನು ಕಲ್ಪಿಸಿ ಆರ್ಥಿಕ ಸದೃಢತೆಯನ್ನು ಒದಗಿಸುವ ಯೋಜನೆ. |

| | | |
|---|---|---|
| ಆ | ರೇಷ್ಮೆ ಇಲಾಖೆ ಅಡಿಯಲ್ಲಿ ಬರುವ ನಿಗಮ ಮಂಡಳಿ, ಪ್ರಾಧಿಕಾರ, ಆಯೋಗ, ಅಕಾಡೆಮಿ, ಅಂಗಸಂಸ್ಥೆಗಳು ಯಾವುವು; ಯಾವ ಉದ್ದೇಶಕ್ಕಾಗಿ ಯಾವಾಗ ಸ್ಥಾಪನೆ ಮಾಡಲಾಗಿದೆ; (ವಿವರ ನೀಡುವುದು) | ರೇಷ್ಮೆ ಇಲಾಖೆಯಡಿ ಈ ಕೆಳಕಂಡ ನಿಗಮ / ಮಂಡಳಿ ಮತ್ತು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.<br><br>1. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ<br>2. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ<br>3. ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ.<br><br>**ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ**<br><br>ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು, ರೇಷ್ಮೆ ವಿನಿಮಯ ಕೇಂದ್ರದ ಅನುಬಂಧ ಸಂಸ್ಥೆಯಾಗಿ 1979 ರಲ್ಲಿ ಸ್ಥಾಪನೆಯಾಗಿರುತ್ತದೆ.<br><br>**ಉದ್ದೇಶ:**<br><br>1. ರೇಷ್ಮೆ ಬೆಲೆಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದು.<br>2. ಮಾರುಕಟ್ಟೆ ಮಧ್ಯಪ್ರವೇಶ ಮಾಡಿ ರೈತರ ಮತ್ತು ರೀಲರುಗಳ ಹಿತ ಕಾಪಾಡುವುದು.<br>3. ನೇಕಾರರಿಗೆ ಉತ್ತಮ ಗುಣಮಟ್ಟದ ರೇಷ್ಮೆ ನೂಲನ್ನು ನಿರಂತರವಾಗಿ ನ್ಯಾಯಯುತ ಬೆಲೆಗಳಲ್ಲಿ ಸರಬರಾಜು ಮಾಡುವುದು.<br><br>**ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ**<br><br>ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವನ್ನು 1980 ರಲ್ಲಿ ಸ್ಥಾಪಿಸಲಾಯಿತು.<br><br>**ಉದ್ದೇಶ:**<br><br>ಸರ್ಕಾರಿ ನಿಯಂತ್ರಿತ ಮಾರುಕಟ್ಟೆಗಳ ಮೂಲಕ ರೈತರಿಂದ ರೇಷ್ಮೆಗೂಡುಗಳನ್ನು ಖರೀದಿಸಿ, ರೇಷ್ಮೆ ನೂಲನ್ನು ತೆಗೆದು, ಪಾರಂಪರಿಕ "ಮೈಸೂರು ಸಿಲ್ಕ್" ಸೀರೆಗಳು ಮತ್ತು ಇನ್ನಿತರ ರೇಷ್ಮೆ ಉತ್ಪನ್ನಗಳನ್ನು ಉತ್ಪಾದಿಸಿ ಮಾರಾಟ ಮಾಡುವುದು. |